॥ ಸಿರಿಗನ್ನಡಂಗೆಲ್ಗೆ ॥

# ಮೂವತ್ತೇಳನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಮೈಸೂರು

## ಲೇಖಕರ ಗೋಷ್ಠಿಯ ಅಧ್ಯಕ್ಷರಾದ ಶ್ರೀ ಸಿದ್ಧಯ್ಯ ಪುರಾಣಿಕ ಅವರ ಅಧ್ಯಕ್ಷ ಭಾಷಣ

10—6—1955

ಚೋದಯಿತ್ರೀ ಸೂನೃತಾನಾಂ
ಚೇತಂತೀ ಸುಮತೀನಾಂ ।
ಯಜ್ಞಂ, ದಧೇ ಸರಸ್ವತೀ ॥ (ಋ. ೧-೩ ೧೧)

ಈ ಸಾರಸ್ವತ ಯಜ್ಞದಲ್ಲಿ ಸೇರಿರುವ ಕನ್ನಡ ರಸ ಸರಸ್ವತಿಯ ಸಂತಾನಕ್ಕೆ ಶರಣು.

ಮತ್ತೊಮ್ಮೆ ಈ ಅಪ್ರಬುದ್ಧಚೇತನನಿಗೆ ಈ ಉನ್ನತಾಸನವನ್ನಿತ್ತ ತಮಗೆ ತಲೆಬಾಗುವೆನು. ಅನರ್ಹತೆಯಲ್ಲಿಯೂ ಅರ್ಹತೆಯನ್ನು ಆರೋಪಿಸುವುದು ಮಮತೆ, ಸಹೋದರತೆ. ಅದರ ಶೀರ್ಮಾನಕ್ಕೆ ತಲೆಬಾಗದಿರುವುದು ಹೇಗೆ ಸಾಧ್ಯ ? ಪ್ರೀತಿಗೆ ಮೇಲೆತ್ತುವ ಶಕ್ತಿಯೊಂದೇ ಅಲ್ಲ. ಕೈವಿಡಿದು ಮುನ್ನಡಸುವ ಶಕ್ತಿಯೂ ಇದೆಯೆಂದಮೇಲೆ ನಾನೇಕೆ ಅಂಜಿ ಹಿಂಜರಿಯಲಿ ?

ಲೇಖಕರು ತಮ್ಮ ಅಸ್ತಿತ್ವವನ್ನು ಸಮರ್ಥಿಸಿಕೊಳ್ಳುವ ಆವಶ್ಯಕತೆ ಈಗ ಉಳಿದಿಲ್ಲ. New man ನು ತನ್ನ ಹೊನ್ನಿನ ನುಡಿಯಲ್ಲಿ ಹೇಳಿರುವಂತೆ, "If then the power of speech is as great as any that can be named, — if the origin of language is by many philosophers considered nothing short of divine - if by means of words the secrets of the heart are brought to light, pain of soul is relieved, hidden grief is carried off, sympathy conveyed, experience is recorded and wisdom perpetuated, - if by great authors the many are drawn up into unity, national charactor is fixed, a people speaks, the past and the future, the East and the West are brought into communication with each other, - if such men are, in a word, the spokesmen and the prophets of the human famaily - it will not answer to make light of literature or to neglect its study."

ಈ ಉಕ್ತಿಯಲ್ಲಿ ಬರುವ 'ರೆ' ಪ್ರತ್ಯಯಗಳ ಔಚಿತ್ಯವನ್ನು ಗಮನಿಸಿ. ಈ ನೆಗಳ್ತೆ, ಈ ಹೆಗ್ಗಳಿಕೆ ಎಲ್ಲ ಸಾಹಿತ್ಯಕ್ಕೆ, ಎಲ್ಲ ಲೇಖಕರಿಗೆ ಸಲ್ಲುವುದಿಲ್ಲ — ಹೃದಯರಹಸ್ಯಗಳನ್ನು ಹೊರಗೆಳೆಯುವ, ಆತ್ಮವೇದನೆಯನ್ನು ಪರಿಹರಿಸುವ, ಪ್ರಚ್ಛನ್ನ ಪರಿತಾಪವನ್ನು ಹೋಗಲಾಡಿಸುವ, ಸಹಾನುಭೂತಿಯ ಸಂದೇಶವನ್ನು ಸಾರುವ, ಅನುಭವವನ್ನು ಉಲ್ಲೇಖಿಸುವ, ಸುಜ್ಞಾನವನ್ನು ಸ್ಥಿರೀಕರಿಸುವ ಸಾಹಿತ್ಯಕ್ಕೆ ಮಾತ್ರ — ಅನೇಕತ್ವದಲ್ಲಿ ಏಕತ್ವವನ್ನೂ, ವಿಭಕ್ತದಲ್ಲಿ ಅವಿಭಕ್ತವನ್ನೂ, ರಾಷ್ಟ್ರೀಯ ಚಾರಿತ್ರ್ಯವನ್ನೂ ರೂಪಿಸಬಲ್ಲ, ಜನಕ್ಕೆ ಜನವೇ ನುಡಿದಂತೆ ಬರೆಯಬಲ್ಲ, ಭೂತ ಭವಿಷ್ಯಗಳನ್ನೂ ಪೂರ್ವ ಪಶ್ಚಿಮಗಳನ್ನೂ ಸಂಗಮಿಸಬಲ್ಲ ಮಾನವ ಕುಟುಂಬದ ವಕ್ತಾರರೂ ಪ್ರವಾದಿಗಳೂ ಆದ ಲೇಖಕರಿಗೆ ಮಾತ್ರ ಸಲ್ಲುತ್ತದೆ.

ಲೇಖಕನಿಗೆ ಈ ಸಿದ್ಧಿ ಸುಲಭಸಾಧ್ಯವಲ್ಲ. ಎಲ್ಲ ಕಲೆಗಳಂತೆ ಲೇಖನವೂ ಒಂದು ಕಲೆಯೆಂಬುದು ನಿಜವಾದರೂ ಉಳಿದ ಕಲಾಕರ್ಮಗಳಿಗಿಂತ ಲೇಖಕನ ಕಲಾಕರ್ಮ ಕಷ್ಟತರವಾದುದು. ಇದಕ್ಕೆ ಕಾರಣ ಲೇಖಕನ ಆತ್ಮಾಭಿವ್ಯಕ್ತಿಯ ಮಾಧ್ಯಮವಾದ ಮಾತಿನ ಸ್ವರೂಪ.

ಮಾತಿನಲ್ಲಿ ಸಾಮಾನ್ಯತೆ ಅಸಾಮಾನ್ಯತೆಗಳೆರಡೂ ಸೇರಿವೆ. ಸಾಮಾನ್ಯವಾದ ಮಾತಿನಲ್ಲಿ ಬರೆದರೆ ಸಾಹಿತ್ಯವಾಗುವುದಿಲ್ಲ. ಅಸಾಮಾನ್ಯವಾದ ಮಾತಿನಲ್ಲಿ ಬರೆದರೆ ಎಲ್ಲರಿಗೆ ಸುಲಭವಾಗಿ ಅರ್ಥವಾಗುವುದಿಲ್ಲ. "ವಾಚಾಮೇವ ಪ್ರಸಾದೇನ ಲೋಕಯಾತ್ರಾ ಪ್ರವರ್ತತೇ, ಇದಮಂಧಂ ತಮಃ ಕೃತ್ಸ್ನಂ ಜಾಯೇತ ಭುವನತ್ರಯಂ | ಯದಿ ಶಬ್ದಾಹ್ವಯಂ ಜ್ಯೋತಿರಾ ಸಂಸಾರಾನ್ನ ದೀಪ್ಯತೇ॥ ಎಂಬ ಕಾವ್ಯಾದರ್ಶಕಾರನ ನುಡಿ ನಿಜವಾದರೂ ಮಾತು ಜ್ಯೋತಿಯಾಗುವುದು, ಜ್ಯೋತಿರ್ಲಿಂಗವಾಗುವುದು ಸಾಮಾನ್ಯ ಸಾಧನೆಯಿಂದ ಸಿದ್ಧಿಸುವ ವಿಷಯವಲ್ಲ. ಪಾಠಕರ ಪ್ರಶ್ನೆ ದೂರ ಉಳಿಯಿತು, ಕೆಲವು ಲೇಖಕರು ಕೂಡ ಇದನ್ನು ಗಮನಿಸುವಂತೆ ತೋರುವುದಿಲ್ಲ — ಲೆಕ್ಕಣಿಕೆಯನ್ನೆತ್ತುವ ಮೊದಲು ಮಾತಿನ ಮರ್ಮವನ್ನು, ಅದರ ನೂರು ಮುಖಗಳನ್ನು, ಅದರ ಅಂತರ್ಬಾಹ್ಯ ಸೌಂದರ್ಯಗಳನ್ನು, ಅದರ ಸೂಕ್ಷ್ಮತೆ ತೀಕ್ಷ್ಣತೆಗಳನ್ನು, ಅದರ ಅನಂತ ಲೀಲಾ ವಿನ್ಯಾಸಗಳನ್ನು, ಅದರ ಶಕ್ಯಾಶಕ್ಯತೆ ಸೀಮಾಸೀಮತೆಗಳನ್ನು ಅರಿತುಕೊಳ್ಳುವುದು ಆವಶ್ಯಕವೆಂಬುದನ್ನು ಒಪ್ಪುವಂತೆ ತೋರುವುದಿಲ್ಲ. ಎಂತಲೇ ವಸ್ತುವಿನ ಉತ್ತಮಿಕತೆ ಅನೇಕ ಸಂದರ್ಭಗಳಲ್ಲಿ ಮಾತಿನ ಅಸಮರ್ಪಕತೆಯಲ್ಲಿ ಅಡಗಿ ರಸ ಪ್ರಕಾಶಕ್ಕೆ ಪ್ರತಿಯಾಗಿ ರಸಾಭಾಸದಲ್ಲಿ ಪರ್ಯವಸಾನವನ್ನು ಹೊಂದುವುದುಂಟು. "ಅನುದ್ವೇಗಕರಂ ವಾಕ್ಯಂ ಸತ್ಯಂ ಚ ಪ್ರಿಯಹಿತಂ ಚ ಯತ್" ಎಂಬ ಸರ್ವವ್ಯಾಪಿಯಾದ ವ್ಯಾಖ್ಯೆಯಲ್ಲಿ ಭಗವಂತನೇ ಮಾತಿನ ನೀತಿಯನ್ನು ಬಿತ್ತರಿಸಿದ್ದಾನೆ. ಈಗಿನ ಎಷ್ಟು ಕೃತಿಗಳ ಭಾಷೆ ಈ ಒರೆಗಲ್ಲಿಗೆ ಹತ್ತುತ್ತದೆ?

### ವಾಙ್ಮಯಂ ತಪ ಉಚ್ಯತೇ

ಭಾಷೆಯ ಹುರುಳು ತಿರುಳುಗಳನ್ನರಿತುಕೊಂಡ ಮೇಲೂ ತೀರುವುದಿಲ್ಲ ಲೇಖಕನ ಪೂರ್ವಸಿದ್ಧತೆ. ಸ್ವಾಧ್ಯಾಯ ಅಭ್ಯಸನಗಳೂ ಆ ಪೂರ್ವಸಿದ್ಧತೆಯ ಅಪರಿಹಾರ್ಯ ಅಂಗಗಳು. 'ಮುತ್ತಿನ ಹಾರದಂತೆ, ಲಿಂಗ ಮೆಚ್ಚಿ ಅಹುದೆನುವಂತೆ' ನುಡಿಯುವುದನ್ನು ಕಲಿಯುವುದರ ಜೊತೆಗೆ ಲೇಖಕನಾಗುವವನಿಗೆ ಜ್ಞಾನ, ಅನುಭವ ವಿವೇಕಗಳೂ ಬೇಕೆಂಬುದನ್ನು ಸ್ವಾಧ್ಯಾಯ ಪದ ಸೂಚಿಸುತ್ತದೆ; ಪ್ರತಿಭೆಗೆ ವ್ಯುತ್ಪತ್ತಿಯ ಸಂಸ್ಕರಣ ಬೇಕೆಂಬುದನ್ನು ಅಭ್ಯಸನ ಪದ ಸೂಚಿಸುತ್ತದೆ — ಭಗವಂತನೇ ಗೈದ ವಾಙ್ಮಯತಪದ ವ್ಯಾಖ್ಯೆಯಲ್ಲಿ. ಇವುಗಳಲ್ಲಿ ಒಂದೊಂದು ಪದಕ್ಕೂ ಒಂದು ಬ್ರಹ್ಮಾಂಡದಷ್ಟು ಅರ್ಥ. ಜ್ಞಾನವು ಔಚಿತ್ಯಜ್ಞಾನ, ಪರಿಪೂರ್ಣ ಜ್ಞಾನ, ವಸ್ತುಜ್ಞಾನ ಇತ್ಯಾದಿನೂರು ರೂಪಗಳಲ್ಲಿ ರಾರಾಜಿಸುವ ಜ್ಞಾನ; ಅನುಭವವು ಅಂತರಂಗದ ರತ್ನ — ಅದರ ಹೊಳಪಿಲ್ಲದ ಬರೆವಣಿಗೆ ಬರಿ ಶಬ್ದ ಸಮುಚ್ಚಯ; ವಿವೇಕವು ಸದಸದ್ವಿವೇಕ, ಹಿತಾಹಿತ ವಿವೇಕ, ಸಾರಾಸಾರ ವಿವೇಕ ಇತ್ಯಾದಿ ಅನೇಕ ಮುಖಗಳುಳ್ಳ ವಿವೇಕ. ಇದೇ ವ್ಯುತ್ಪತ್ತಿ. 'ಉಚಿತಾನುಚಿತವಿವೇಕೋ ವ್ಯುತ್ಪತ್ತಿಃ' 'ವ್ಯುತ್ಪತ್ತಿಃ ತದುಪಯೋಗಿ ಸಮಸ್ತ ವಸ್ತು ಪೌರ್ವಾಪರ್ಯ ಪರಾಮರ್ಶ ಕೌಶಲಂ.' ಈ ವ್ಯುತ್ಪತ್ತಿ ಪ್ರತಿಭೆಯೊಡನೆ ಒಡವೆರೆದು ಅನುದ್ವೇಗಕರ, ಹಿತಕರ, ಪ್ರಿಯಕರ ಮತ್ತು ಋತಂಧರ ವಾಕ್ಯಗಳಲ್ಲಿ ವ್ಯಕ್ತವಾದಾಗ ಉತ್ತಮ, ಉದಾತ್ತ, ಪವಿತ್ರ ಸಾಹಿತ್ಯದ ಪ್ರಾದುರ್ಭಾವ.

ಈ ಪೂರ್ವಸಿದ್ಧತೆಯಲ್ಲಿ, ವಾಙ್ಮಯ ತಪಸ್ಸಿನಲ್ಲಿ ಸೇರ್ಪಡೆಯಾಗಬೇಕಾದ ಬೇರೆ ಅಂಶಗಳೂ ಇವೆ. ಅವೆಲ್ಲ ಅಲಂಕಾರಿಕರ ಗರಡಿಯಲ್ಲಿ ಕಲಿಯ ಬೇಕಾದ ಅಂಶಗಳು. ಅವುಗಳ ವಿವರಣೆ ಇಲ್ಲಿ ಅಪ್ರಾಸಂಗಿಕ. ಮುಖ್ಯವಾದುದು 'ಸ್ವಾತ್ಮಾಯತನ ವಿಶ್ರಾಂತ' ಸಹಜ ಮತ್ತು ಉತ್ಪಾದ್ಯ, ಭಾವಯಿತ್ರೀ ಮತ್ತು ಕಾರಯಿತ್ರೀ ಪ್ರತಿಭೆಗೆ ವ್ಯುತ್ಪತ್ತಿ ಅಭ್ಯಾಸಗಳ ಒಪ್ಪ. ಪ್ರತಿಭೆ ಅಗ್ನಿಯಾದರೆ ವ್ಯುತ್ಪತ್ತಿ ಅಭ್ಯಾಸಗಳು ಅದನ್ನು ಜ್ಯೋತಿಯನ್ನಾಗಿ ಮಾರ್ಪಡಿಸುವ ಪರಿಕರಗಳು. ಬರಿಯ ಬೆಂಕಿಯ ಬೆಳಕಿನಲ್ಲಿ ಬರೆಯಲಿಕ್ಕಾದೀತೆ — ಬೆಂಕಿ ಬೆಟ್ಟಕ್ಕೇ ಹತ್ತಿ ಬುವಿ ಬಾನುಗಳನ್ನು

ತುಂಬಿ ನಿಂತರೂ ಕೂಡ? ಬರೆಯಲು ಹಣತೆಯ ಮಿಣುಕು ಬೆಳಕೂ ಸಾಕಾಗಬಹುದು— ಜ್ವಾಲಾಮುಖಿಯ ಅಗ್ನಿಧಾರೆಯಲ್ಲ. ಬೇಗೆಯ ಬೆಳಕಿನಲ್ಲಿ ಬರೆಯಲು ಹವಣಿಸಿದರೆ ಹೊರಡುವುದು ಮಸಕು ಮಸಕಾದ ಬರೆವಣಿಗೆ. ಇನ್ನೊಂದು ರೂಪಕದಿಂದ ಇದನ್ನು ಇನ್ನಷ್ಟು ಸ್ಪಷ್ಟಗೊಳಿಸಬಹುದು. ಪ್ರತಿಭೆ ಪ್ರವಾಹವಾದರೆ ವ್ಯುತ್ಪತ್ತಿ ಅಭ್ಯಸನಗಳು ಸಂಯಮದ ಕಟ್ಟೆಯನ್ನು ಕಟ್ಟಿ ಆ ಪ್ರವಾಹವನ್ನು ತಡೆದು ನಿಲ್ಲಿಸಿ, ಔಚಿತ್ಯವನ್ನನುಸರಿಸಿ ಕೊರೆದ ಕಾಲುವೆಗಳಲ್ಲಿ ನೀರನ್ನು ಹರಿಸಿ, ನೀರಾವರಿಯಿಂದ ಹೊಲ ತೋಟ ಗದ್ದೆಗಳಲ್ಲಿ ಹಸಿರನ್ನೂ ಹೊಂಗಾಳನ್ನೂ ಹೂವು ಹಣ್ಣುಗಳನ್ನೂ ಹೊಮ್ಮಿಸುವ ಹದಗಾರಿಕೆಗಳು.

### ಸಖಾಯಃ, ಕ್ರತುಂ ಇಚ್ಛತ !

ಇವೆಲ್ಲವನ್ನೂ ಮೇಳವಿಸಿ ಋಗ್ವೇದದ ಕ್ರತು ಶಬ್ದದಲ್ಲಿ ಅಡಗಿಸಬಹುದು. ಈ ಕ್ರತು ದರ್ಶನವನ್ನು ಲೇಖಕನು ಮೊದಲು ಪಡೆಯಬೇಕು. ಸ್ವಯಂ ವಾಗ್ದೇವಿಯೇ ಸಾರುತ್ತಿದ್ದಾಳೆ, "ಯಂ ಕಾಮಯೇ ತಂ ತಂ ಉಗ್ರಂ ಕರೋಮಿ, ತಂ ಬ್ರಹ್ಮಾಣಂ ತಮ್ ಋಷಿಂ ತಂ ಸುಮೇಧಾಮ್" ಎಂದು. ಆಕೆಯ ಈ ಅಭಯ ವಾಣಿಗೆ ಓ ಗೊಟ್ಟು ಬ್ರಹ್ಮಾನಂದ ಸಹೋದರವಾದ ಸಾಹಿತ್ಯ ಸೃಷ್ಟಿಗೆ ಕೈಹಾಕುವ ಮುನ್ನ ಕ್ರತುಶಕ್ತಿ ಸಾಕ್ಷಾತ್ಕಾರ ಮಾಡಿಕೊಳ್ಳುವವರೇ ಸಾರ್ಥಕ ಸಾಹಿತಿಗಳಾಗಬಲ್ಲರು. ಈ ನಿರ್ಮಾಣ ಶಕ್ತಿ, ಕ್ರತುಶಕ್ತಿಗಳೇ ವ್ಯಕ್ತಿತ್ವದ ಕೀಲಿಯ ಕೈ. ಸ್ವಂತ ವ್ಯಕ್ತಿತ್ವದಿಂದ ಸ್ವಂತ ಶೈಲಿ, ಸ್ವಂತ ಶೈಲಿಯಿಂದ ಸ್ವಂತ ಸಾಹಿತ್ಯ. ಸಾಹಿತ್ಯಕ್ಕೆ ಸ್ವಂತಿಕೆ ಬರುವುದು ಸ್ವಂತದ ಶಕ್ತಿ ವಿಕಾಸದಿಂದ— ಅನ್ಯರ ಅನುಕರಣದಿಂದಲ್ಲ, ಆತ್ಮಸ್ತುತಿ ಪರನಿಂದೆಗಳಿಂದಲ್ಲ, ಉದ್ವೇಗ, ಅಬ್ಬರ, ಉಬ್ಬರಗಳಿಂದಲ್ಲ, ವಿದ್ರೋಹಿ - ವಿಧ್ವಂಸಕ - ವಿಪರೀತ ಬುದ್ಧಿಗಳಿಂದಲ್ಲ, ವಿಲಾಸಮತಿ - ಪರಾಜಯಮತಿ - ಪಲಾಯನ ಮತಿಗಳಿಂದಲ್ಲ, - ತನ್ನಲ್ಲಿಯೇ ಸುಪ್ತವಾಗಿರುವ ಶಕ್ತಿಯ ಸಾಕ್ಷಾತ್ಕಾರದಿಂದ. ರಾಜಶೇಖರನೆಂದಂತೆ, "ಶಕ್ತಸ್ಯ ಪ್ರತಿಭಾತಿ, ಶಕ್ತಶ್ಚ ವ್ಯುತ್ಪದ್ಯತೇ." ಉಪನಿಷದೃಷಿಗಳೂ ಸಾರಿದ್ದಾರೆ, "ನಾಯಮಾತ್ಮಾ ಬಲಹೀನೇನ ಲಭ್ಯಃ" ಎಂದು. ಆತ್ಮ ಲಭಿಸದವನಿಗೆ ಆತ್ಮಾಭಿವ್ಯಕ್ತಿಯಾದ ಸಾಹಿತ್ಯವು ಲಭಿಸುವುದೆಂತು ?

### ಋಷಿಶ್ಚ ಕಿಲ ದರ್ಶನಾತ್

ವಾಗ್ದೇವಿ ನಮ್ಮನ್ನು ಋಷಿಗಳನ್ನಾಗಿ ಮಾಡುವೆನೆಂದು ಅಭಯವೀಯುತ್ತಲಿದ್ದಾಳೆ. ಋಷಿಯಾಗದೆ ಕವಿಯಾಗಲಾರೆ ಅರ್ಥಾತ್ ಸಾಹಿತ್ಯ ನಿರ್ಮಾತನಾಗಲಾರೆಯೆಂದು ಕಲಾದರ್ಶನ ಪರಿಣತರೂ ಪ್ರವಾದಿಗಳೂ ಎಚ್ಚರಿಸುತ್ತಲಿದ್ದಾರೆ. ಋಷಿ ಯಾರು ? 'ನಾರು ಬೇರಿನ ಕುಟಿಲ ಕುಹಕದ ಕಪಟಯೋಗ'ಕ್ಕೆ ಋಷಿಯೆಂಬ ಹೆಸರೆ ? ಅಲ್ಲ. ದರ್ಶನವುಳ್ಳವನು ಋಷಿ. ದರ್ಶನವೆಂದರೇನು ? "ವಿಚಿತ್ರಭಾವಧರ್ಮಾಂಶತತ್ತ್ವ ಪ್ರಖ್ಯಾಚ ದರ್ಶನಂ" — ಜಗತ್ತಿನ ವಿವಿಧ ವಸ್ತುಗಳ ಧರ್ಮಾಂಶದ ತತ್ತ್ವವನ್ನು ಕಾಣುವುದೇ ದರ್ಶನ. ಇದು ಸಾಧ್ಯವಾಗುವುದು ಹೇಗೆ? "ಮತಿ ದರ್ಪಣೇ ಕವೀನಾಂ ವಿಶ್ವಂ ಪ್ರತಿಫಲತಿ." ಪ್ರತಿಫಲಿಸಬೇಕು. ವಿಶ್ವರಹಸ್ಯ ಭೇದನ ಕುತೂಹಲ ಆತ್ಮ ರಹಸ್ಯ ಶೋಧನ ಕುತೂಹಲಗಳ ಸಂಯೋಗದಲ್ಲಿ ದರ್ಶನದ ಅವತಾರ. ತಾನು ತನ್ನನ್ನು ತಿಳಿದುಕೊಳ್ಳಬೇಕೆನ್ನುವ, ತನ್ನ ಸುತ್ತುಮುತ್ತಲಿನ ಜನ ಜೀವನವನ್ನು ತಿಳಿದುಕೊಳ್ಳಬೇಕೆನ್ನುವ, ಇವೆಲ್ಲವುಗಳಿಗೂ ಆಶ್ರಯವಾಗಿ ಆವರಿಸಿರುವ ವಿಶ್ವರಹಸ್ಯವನ್ನು ತಿಳಿದುಕೊಳ್ಳಬೇಕೆನ್ನುವ ಋತಂಭರ ಪ್ರಜ್ಞೆಯ ಪರಿಪಾಕವೇ ದರ್ಶನ. ದೃಷ್ಟಿಯು ಎಷ್ಟು ದೊಡ್ಡದಾಗಿ ಎಷ್ಟು ಹೆಚ್ಚು ಹೆಚ್ಚು ಜೀವನವನ್ನೂ, ಜಗತ್ತನ್ನೂ ನೋಡಿ ಅವುಗಳ ಅಗಲಕ್ಕೆ ಹಬ್ಬಿ, ಆಳಕ್ಕೆ ಇಳಿದು, ಎತ್ತರಕ್ಕೆ ಏರಲು ಹವಣಿಸುವುದೋ ಅಷ್ಟು ದರ್ಶನವೂ ವಿಶಾಲ. ವ್ಯಾಪಕ ಮತ್ತು ಅರ್ಥಪೂರ್ಣವಾಗುತ್ತದೆ. ಲೇಖಕ ಯಾವುದನ್ನು ನೋಡಲೂ ಒಲ್ಲೆನೆನ್ನಲಾರ. God gave all men

all earth to love. ನಾವೇಕೆ ಎಲ್ಲವನ್ನೂ ಕಣ್ತೆರೆದು ನೋಡುವ ಅವಕಾಶವನ್ನು ಕಳೆದುಕೊಳ್ಳಬೇಕು ? 'ಅಷ್ಟಕೋಟಿ ರೋಮಗಳೆಲ್ಲ ಕಂಗಳಾಗಿ' ಜೀವನವನ್ನೂ ಜಗತ್ತನ್ನೂ ಮತ್ತು ತನ್ನನ್ನೇ ತಾನು ನೋಡುವುದರಲ್ಲೇಕೆ ಕೊರತೆಮಾಡಬೇಕು – ಕೃಪಣತನ ತೋರಬೇಕು ?

ಇದೂ ಸಾಲದು. ಯುಗಯುಗಗಳಿಂದ ಬೆಳೆದು ಬಂದಿರುವ ಜ್ಞಾನ ಭಾಂಡಾರವನ್ನೂ ಸೂರೆಗೊಳ್ಳಬೇಕವನು. ಇದು ನನ್ನ ಕ್ಷೇತ್ರವಲ್ಲ, ಇದರೊಡನೆ ನನ್ನ ಸಂಬಂಧವಿಲ್ಲ. ಇದರ ಗೊಡವೆ ನನಗೇಕೆ—ಎಂಬ ಸೊಲ್ಲು ಹೊಲ್ಲ. ಹೆಗೆಲ್ ಹೇಳಿದಂತೆ ಸಾಹಿತ್ಯವು, "the comprehensive essence of the intellectual life of a nation" ಆಗಬೇಕಾದರೆ, "the whole mind-life of the successive generations of men," ಆಗಬೇಕಾದರೆ ಎಲ್ಲ ವಿದ್ಯೆಗಳ, ಎಲ್ಲ ಶಾಸ್ತ್ರಗಳ, ಎಲ್ಲ ಕಲೆಗಳ ಸಾರಸತ್ವಗಳೂ ನನ್ನವೆಂಬ ಮನೋಧರ್ಮ ಲೇಖಕನದಾಗಬೇಕು. ಕ್ಷೇಮೇಂದ್ರ ಮೊದಲಾದ ಲಾಕ್ಷಣಿಕರು ಏನೇನು ಅರಿತಿರಬೇಕೆಂಬುದನ್ನು ವಿವರಿಸಿರುವುದನ್ನು ನೋಡಿದರೆ ಅದಕ್ಕೆ ಇತಿಮಿತಿಗಳಾವುವೂ ಇಲ್ಲವೆಂದೆನಿಸುತ್ತದೆ. ನಿಜ, ಜ್ಞಾನದ ಜಗತ್ತಿನಲ್ಲಿ ಗಡಿಗೆರೆಗಳಿಲ್ಲ, ಸ್ಪೃಶ್ಯಾಸ್ಪೃಶ್ಯತೆಗಳಿಲ್ಲ, ವಾಂಛನೀಯ ಅವಾಂಛನೀಯಗಳಿಲ್ಲ.

ಲೇಖಕನ ದೃಷ್ಟಿಯಲ್ಲಿ, ತತ್ಪರಿಣಾಮವಾದ ಸೃಷ್ಟಿಯಲ್ಲಿ ಏಕಾಗ್ರತೆ ಸಮಗ್ರತೆಗಳ, ಅಂತರ್ಮುಖತೆ, ಬಹಿರ್ಮುಖತೆಗಳ, ಸಾಮಯಿಕತೆ ಸಾರ್ವಕಾಲಿಕತೆಗಳ, ಪ್ರತಿಭೆ ಪ್ರಜ್ಞೆಗಳ, ಅನುಕರಣ ನಿರ್ಮಾಣಗಳ, ಆತ್ಮನಿಷ್ಠತೆ ವಸ್ತುನಿಷ್ಠತೆಗಳ, ನೂತನ ಸನಾತನಗಳ, ಸಂಪ್ರದಾಯ ಹೊಸ ರೀತಿಗಳ, ವ್ಯಷ್ಟಿ ಸಮಷ್ಟಿಗಳ ಹೃದಯಂಗಮ ಸಂಗಮವಾದಾಗ ಅವನು ರಸ ಋಷಿಯಾಗುವನು; ಅವನದೇ ಆದ ದಿವ್ಯದರ್ಶನವು ರೂಪುಗೊಳ್ಳುವುದು; ಅವನ ವೈಯಕ್ತಿಕವಾಣಿ ವಿಶ್ವವಾಣಿಯಾಗಿ, ಮನುಕುಲದ ಮಂಗಲ ಗೀತೆಯಾಗಿ ಹೊರಹೊಮ್ಮುವುದು.

ದರ್ಶನವೆಂದೊಡನೆ ಅದು ಎಲ್ಲ ಲೇಖಕರಿಗೆ ಸಮಾನವಾದ ಜೀವನ ದರ್ಶನವಾಗಿರಬೇಕೆಂದು ಹೇಳಲಾಗದು. ಅದು ಯಾವುದೇ ಒಂದು ಹಳೆಯ ಇಲ್ಲವೆ ಹೊಸ ಧರ್ಮ, ಮತ, ತತ್ತ್ವ, ಸಂಪ್ರದಾಯ, ವಿಚಾರ ಪ್ರಣಾಲಿ, ನಂಬಿಕೆಗಳ ಅಂಧಾನುಕರಣ ಇಲ್ಲವೆ ಸ್ವೀಕರಣವಲ್ಲ. ಅದು ಲೇಖಕನ ಸ್ವಂತ ಜೀವನಾನುಭವ ರಸಾನುಭವಗಳಿಂದ ರೂಪಗೊಂಡ ಜೀವನದೃಷ್ಟಿ, ರಸದೃಷ್ಟಿ, ಅದು ಪ್ರತಿಯೊಬ್ಬ ಲೇಖಕನ ವಿಶಿಷ್ಟ ಪರಿಸರ, ಸಂಸ್ಕಾರ, ಮನೋಧರ್ಮ, ಅನುಭವ, ಆವರಣ, ವ್ಯಕ್ತಿ–ಯುಗ–ಪ್ರಭಾವಗಳಿಂದ ವ್ಯಕ್ತಿ ವ್ಯಕ್ತಿಯಲ್ಲಿ ವಿವಿಧರೂಪ ತಾಳುತ್ತದೆ. ಎಲ್ಲ ಲೇಖಕರೂ ತಮ್ಮ ತಮ್ಮ ಜೀವನ ದರ್ಶನವನ್ನು ತಾವೇ ಕಂಡುಕೊಳ್ಳಬೇಕು. ಹೀಗೆಂದ ಮಾತ್ರಕ್ಕೆ ಎಲ್ಲರೂ ಹೊಸ ದರ್ಶನವನ್ನೇ ಹುಡುಕಲು ಹಟತೊಡಬೇಕೆಂದಲ್ಲ. ತನ್ನ ಅನ್ವೇಷಣೆಯ, ಆವಿಷ್ಕಾರದ, ಪೃಥಕ್ಕರಣದ, ಚಿಂತನದ, ಮಂಥನದ, ಜೀವಾನುಭವದ, ಸೌಂದರ್ಯಾನುಭೂತಿಯ, ರಸಪ್ರಜ್ಞೆಯ, ಕಲಾಚೇತನದ, ವಿಶಿಷ್ಟ ರುಚಿಯ, ನೋಟದ, ನಿಲುವೆಯ, ಹಂಬಲದ, ಹಾರೈಕೆಯ ಸಹಜ ಸಿದ್ಧಿಯಾಗಿ ಈಗಿರುವ ದರ್ಶನಗಳಲ್ಲಿಯೇ ಯಾವುದೋ ಒಂದು ಅವನ ದರ್ಶನವಾಗಿ ಪರಿಣಮಿಸಿ, ಅವನ ವ್ಯಕ್ತಿತ್ವದ ಮುದ್ರೆ ಧರಿಸಿ, ಅವನ ಕಾಂತಿಯನ್ನು ತಳೆದು ಚೆಲುವಾಗಿ ಮೈದುಂಬಿ ನಿಂತರೆ ಅದು ಅವನ ದರ್ಶನವೇ. ಎಲ್ಲರಿಗಿಂತಲೂ ಭಿನ್ನವಾದ ದರ್ಶನವೊಂದು ನನಗೆ ದೊರೆಯಲಿಲ್ಲವಲ್ಲ—ಎಂದವನು ಕೊರಗಬೇಕಾಗಿಲ್ಲ. ಹೊಸತನದ ಹುಚ್ಚು ಅತಿರೇಕಕ್ಕೆ ಮುಟ್ಟಿ ಆಭಾಸಕ್ಕೆಡೆಗೊಡಬಾರದು. ಹಾಗೆ ನೋಡಿದರೆ ಹೊಸದಾವುದಿದೆ ಈ ವಿಶಾಲ ವಿಶ್ವದಲ್ಲಿ? ಭೂಲೋಕ ಹೊಸದಲ್ಲ, ನಕ್ಷತ್ರಲೋಕ ಹೊಸದಲ್ಲ, ಮನುಜಲೋಕ ಹೊಸದಲ್ಲ, ಪ್ರಾಣಿಲೋಕ ಹೊಸದಲ್ಲ, ಅವುಗಳ ಚಲನ

ವಲನಗಳು, ಜೀವನ ವ್ಯಾಪಾರಗಳು, ಸ್ವಭಾವ ವೈಚಿತ್ರ್ಯ-ವೈಪರೀತ್ಯಗಳು, ಆಶೆ ನಿರಾಶೆಗಳು, ಸುಖ ದುಃಖಗಳು ಹೊಸವಲ್ಲ. ಆನಂದವರ್ಧನನ ಈ ಮಾತು ನಮಗೆ ನೆಮ್ಮದಿಯನ್ನು ತರಬೇಕು:

"ದೃಷ್ಟಪೂರ್ವಾ ಅಪಿಹ್ಯರ್ಥಾಃ ಕಾವ್ಯೇ ರಸಪರಿಗ್ರಹಾತ್ ।
ಸರ್ವೇ ನವಾ ಇವಾ ಭಾಂತಿ ಮಧುಮಾಸ ಇವ ದ್ರುಮಾಃ ॥

ಹಳೆಯ ಮರದಲ್ಲಿ ಮಧುಮಾಸದ ರಸ ಉಕ್ಕಿ ಬಂದಾಗ ಅದು ಹೊಸ ಮರವೇ! ಹಾಗೆಯೇ ಹಳ ಕಾಣ್ಕೆಯಲ್ಲಿ ಹೊಸ ಜೀವರಸ ಹರಿದಾಡಿತೆಂದರೆ ಅದು ಹೊಸ ದರ್ಶನವೇ. ಅದು ಹಳ ಕಾಣ್ಕೆಯ ರೂಪ ಧರಿಸಿದರೂ ಅದರ ತದ್ರೂಪು ಅಲ್ಲ. ಯಾಕೆಂದರೆ ಅದರಲ್ಲಿ ಹೊಸ ಜೀವಿಯೊಬ್ಬನ ಸಾಧನೆಯ ಸತ್ವ ಸೇರಿಕೊಂಡಿರುತ್ತದೆ. ತಂದೆ ಮಗನಲ್ಲಿ ಎಷ್ಟೇ ರೂಪ ಸಾದೃಶ್ಯವಿದ್ದರೂ ತಂದೆಯಂತೆ ಮಗನೆಂದು ಹೇಳಬಹುದೇ ಹೊರತು ತಂದೆಯೂ ಮಗನೂ ಒಂದೇ ಎಂದು ಹೇಳಲಾಗದು. ಇಬ್ಬರಲ್ಲಿ ಎಷ್ಟೇ ಸಾಮ್ಯವಿದ್ದರೂ ಮಗನಲ್ಲಿ ತಂದೆಯಲ್ಲಿರುವ ಆವುದೋ ಅಂಶ ಇಲ್ಲವಾಗಿರುತ್ತದೆ; ಇಲ್ಲವೆ ತಂದೆಯಲ್ಲಿರದ ಅವುದೋ ಅಂಶ ಹೆಚ್ಚಾಗಿರುತ್ತದೆ. ಹಾಗೆಯೇ, ಯಾವುದೋ ಮೊದಲಿನ ದರ್ಶನವೇ ಲೇಖಕನ ದರ್ಶನವಾಗಿ ಮಾರ್ಪಟ್ಟರೂ ಅದು ಒಂದಿಲ್ಲ ಒಂದು ನೂತನಾಂಶವನ್ನು, ಹೊಸರೇಖೆಯನ್ನು, ಹೊಸ ಹೊಳಪನ್ನು ತಳೆದಿರುತ್ತದೆ—ಲೇಖಕನ ಚಿತ್ತವೃತ್ತಿಯ ಮೂಷೆಯಲ್ಲಿ ಕಾಯ್ದು ಕರಗಿ.

ಮುಖ್ಯ ಮಾತು ಇದು: ಲೇಖಕನು ಏನನ್ನೇ ಆರಿಸಿಕೊಳ್ಳಲಿ, ಅದನ್ನು ತನ್ನದನ್ನಾಗಿ ಮಾಡಿಕೊಳ್ಳುವ ಮೊದಲು ಅದನ್ನು ತನ್ನ ಜೀವನದ ಗಾಣದಲ್ಲಿ ಹಿಂಡಿ, ತನ್ನ ಅನುಭವದ ಆಲಿಮನೆಯಲ್ಲಿ ಕಲ್ಪನೆಯ ಕೊಪ್ಪರಿಗೆಯಲ್ಲಿ ಹಾಕಿ ಕಾಸಿ, ತನ್ನ ಕಾಣ್ಕೆಯ ಸಕ್ಕರೆಯನ್ನಾಗಿ ಮಾಡಿಕೊಳ್ಳಬೇಕು. ತಾನು ತಾನಾಗಬೇಕು–ಇನ್ನೇನೂ ಆಗಬಾರದು. ಇಲ್ಲಿ ಮಾರ್ಕಸ್ ಅರೇಲಿಯಸ್ಸನ ಉಕ್ತಿ ನೆನಪಾಗದಿರದು: "Whatever any man does or says, you must follow the guidance of your inner nature, not for any other man's sake, but for the sake of your own Nature. Just as though gold or emerald or purple were continuously saying each to itself, whatever any man says or does, I must still remain gold or emerald or purple, keeping my own natural colour."

ಇಲ್ಲಿ ಇನ್ನೊಂದು ಮಾತನ್ನು ಒತ್ತಿ ಹೇಳದೆ ವಿಧಿಯಿಲ್ಲ. ಎಲ್ಲ ಲೇಖಕರೂ ತಮ್ಮ ತಮ್ಮ ಬೆಳಕಿನಲ್ಲಿ ತಮ್ಮ ತಮ್ಮ ಜೀವನ ದರ್ಶನವನ್ನು ಕಂಡು ಕೊಂಡು ಅದನ್ನು ತಮ್ಮ ಕೃತಿರಚನೆಗಳಿಗೆಲ್ಲ ದಿಕ್ಸೂಚಿಯನ್ನೋ ಧ್ರುವತಾರೆಯನ್ನೋ ಮಾಡಿಕೊಳ್ಳುವುದು ಎಷ್ಟು ಅಗತ್ಯವೋ ಅಷ್ಟೇ—ಅದೇಕೆ, ಅದಕ್ಕೂ ಹೆಚ್ಚು ಆವಶ್ಯಕವಾದುದೊಂದಿದೆ. ಅದೇ ಇನ್ನೊಬ್ಬರ ಜೀವನ ದರ್ಶನದ ಬಗೆಗೆ ಸಹನೆ, ಸಹಾನುಭೂತಿ. ನನ್ನ ಕಾಣ್ಕೆ ದೊಡ್ಡದು, ನಿನ್ನದು ಸಣ್ಣದೆಂಬ ಕೋಲಾಹಲದ ಹಾಲಾಹಲ ಹರಡಿತೆಂದರೆ ಸಾಹಿತ್ಯ ಕ್ಷೇತ್ರ

ಕುರುಕ್ಷೇತ್ರವಾಗುತ್ತದೆ. ಲೇಖಕರಂತೆ ಪಾಠಕರೂ ಭಿನ್ನಭಿನ್ನ ಗುಂಪುಗಳಾಗಿ ವಿಭಕ್ತರಾಗಿ ಒಬ್ಬರು ಇನ್ನೊಬ್ಬರ ಕೃತಿಗಳಲ್ಲಿರುವ ಉತ್ತಮಾಂಶಗಳನ್ನು ಕೂಡ ಕಾಣದಷ್ಟು ಕುರುಡರಾಗಿ ಬಿಡುತ್ತಾರೆ. ರಾಜಕೀಯ ಭಿನ್ನಾಭಿಪ್ರಾಯದ ಮೂಲಕ ಡಾ. ಜಾನ್ಸನ್ನನಿಗೆ ಮಿಲ್ಟನನಂಥ ಮಹಾಕವಿಯಲ್ಲಿಯೂ ಗುಣಾಂಶವಾವುದೂ ಕಾಣಸಲಿಲ್ಲ! ವೈಚಾರಿಕ ವಿಭಿನ್ನತೆಯ ಮೂಲಕ ಇಲಿಯೆಟ್ಟನಿಗೆ ಶೆಲ್ಲಿಯಂಥ ಜಗತ್ಪ್ರಸಿದ್ಧ ಕವಿಯಲ್ಲಿಯೂ ಉತ್ತಮಾಂಶ ಗೋಚರಿಸಲಿಲ್ಲ! ಮತೀಯ ಮತಭೇದದ ಮೂಲಕ ಗ್ರೇ ಕವಿಯಲ್ಲಿ ಡಾ. ಜಾನ್ಸನ್ನನಿಗೆ ಒಳ್ಳೆಯದೇನೂ ಕಾಣಿಸಲಿಲ್ಲ! ಇದಕ್ಕಿಂತ ಶೋಚನೀಯವಾದುದು ಇನ್ನೇನಿದೆ ಸಾಹಿತ್ಯ ಪ್ರಪಂಚದಲ್ಲಿ? ಮಧುರಸವೆಲ್ಲಿದ್ದರೂ ಹೀರುವ ಬಂಡುಣಿಗಳಂತೆ ಸಾಹಿತ್ಯ ಸೃಷ್ಟಿಯಲ್ಲಿ ರಸವೆಲ್ಲಿದ್ದರೂ ಆಸ್ವಾದಿಸುವ ರಸಿಕರಾಗಬೇಕು ಎಲ್ಲರೂ. ಆಗ ಸಾಹಿತ್ಯ ನಂದನವನ; ಇಲ್ಲದಿದ್ದರೆ ರುದ್ರಭೂಮಿ!

ಇದುವರೆಗಿನ ವಿವರಣೆಯನ್ನು ಸಂಗ್ರಹಿಸುವುದು ಅಗತ್ಯ: ಸಾಹಿತ್ಯದ ನಿರ್ಮಾಣ ಶಕ್ತಿ ಪ್ರತಿಭೆ, ವ್ಯುತ್ಪತ್ತಿ, ಅಭ್ಯಸನಗಳ ರಸಪಾಕವಾಗಿ ತಲೆದೋರುತ್ತದೆ. ಅದೇ ಶಕ್ತಿ. ಅದಕ್ಕೆ ದಿಕ್ಸೂಚಿಯಾಗಬಲ್ಲ ದರ್ಶನವೊಂದು ಬೇಕು. ಅದೇ ಶಿವಶಕ್ತಿಯ ಸಂಕೇತ ಶಬ್ದ; ಶಿವದ ಸಂಕೇತ ಅರ್ಥ. ಈ ವಾಗರ್ಥಯುಗಳ ಶಿವಶಕ್ತಿ ಸಮ್ಮಿಲನವಾಗಿ ಶೋಭಿಸಿದಾಗ ಸಾಹಿತ್ಯದ ಸೃಷ್ಟಿ—ಪರಮೋಚ್ಚ ಸಾಹಿತ್ಯದ ಸೃಷ್ಟಿ. ಆದುದರಿಂದ, "ಅತ್ರಾ ಜಹಾಮ ಯೇ ಅಸನ್ನಶೇವಃ | ಶಿವಾನ್ ವಯಮ್ ಉತ್ತರೇ ಮಾಭಿ ವಾಜನ್ ‖ ಎಂಬ ಋಗ್ವೇದ ಮಂತ್ರವು ಲೇಖಕನ ನಿತ್ಯ ಪ್ರಾರ್ಥನೆಯಾಗಬೇಕು.

### ಕಿಂ ಸ್ವಿದ್ ವಕ್ಷ್ಯಾಮಿ?

ಏನನುಸಿರಲಿ ಇದು ಇನ್ನು ಮೇಲಿನ ಪ್ರಶ್ನೆ— ಲೇಖಕನ ಪೂರ್ವ ಸಿದ್ಧತೆ ಮುಗಿಯುತ್ತಲೆ ಅವನನ್ನು ಎದುರಿಸುವ ಪ್ರಶ್ನೆ. ಬೇಕಾದುದನ್ನು ಬರೆ ಎಂಬುದು ಇದಕ್ಕೆ ಉತ್ತರ. ಇಂಥದನ್ನೇ ಬರೆಯೆಂಬ ಕಟ್ಟು ಹಾಕುವುದು 'ಸಾಧುವೂ ಅಲ್ಲ, ಸಾಧ್ಯವೂ ಇಲ್ಲ.'

"ತ್ರೈಲೋಕ್ಯಸ್ಯಾಸ್ಯ ಸರ್ವಸ್ಯ ನಾಟ್ಯಂ ಭಾವಾನುಕೀರ್ತನಂ
ಕ್ವಚಿದ್ಧರ್ಮಃ ಕ್ವಚಿತ್ ಕ್ರೀಡಾ ಕ್ವಚಿದರ್ಥಂ ಕ್ವಚಿಚ್ಛಮಃ ‖
ಕ್ವಚಿದ್ಧಾಸ್ಯಂ ಕ್ವಚಿದ್ಯುದ್ಧಂ ಕ್ವಚಿತ್ಕಾಮಃ ಕ್ವಚಿದ್ವಧಃ
ಧರ್ಮೋ ಧರ್ಮಪ್ರವೃತ್ತಾನಾಂ ಕಾಮಃ ಕಾಮೋಪಸೇವಿನಾಂ ‖
ನ ತತ್ ಜ್ಞಾನಂ ನ ತಚ್ಛಿಲ್ಪಂ ನ ಸಾ ವಿದ್ಯಾ ನ ಸಾ ಕಲಾ
ನಾ ಸೌ ಯೋಗೋ ನ ತತ್ ಕರ್ಮ ನಾಟ್ಯೇಽಸ್ಮಿನ್ ಯನ್ನ ದೃಶ್ಯತೇ ‖

ಎಂದು ನಾಟ್ಯಶಾಸ್ತ್ರಕಾರರು ಹೇಳಿಲ್ಲವೆ? ದಶರೂಪಕದಲ್ಲಿ ವಿಶದಗೊಳಿಸಿರುವಂತೆ, "ರಮ್ಯ, ಅಸಹ್ಯ, ಉದಾರ, ನೀಚ, ಉಗ್ರ, ಪ್ರಸನ್ನ, ಕ್ಲಿಷ್ಟ, ವಿಕೃತ-ವಸ್ತು — ಹೀಗೆ ಯಾವುದಾದರೂ ಆಗಿರಲಿ, ಕಡೆಗೆ ವಸ್ತುವಲ್ಲದ್ದೇ ಆಗಿರಲಿ: ಕವಿಭಾವಕರ ಭಾವನೆಗೆ ವಿಷಯವಾದ ಮೇಲೆ ರಸಮಯವಾಗದ್ದು ಲೋಕದಲ್ಲಿ ಏನೊಂದೂ ಇಲ್ಲ." ಕವಿಶಕ್ತ್ಯರ್ಪಿತವಾದ

ಯಾವುದೇ ವಸ್ತುವೂ ಮೆರುಗನ್ನು ಪಡೆಯುತ್ತದೆ. ಹೇಗೆ? ತನ್ಮಯೀಭಾವಯೋಗದಿಂದ ಈ ಭಾವಯೋಗಿಯಾದವನಿಗೆ ವಿಧಿನಿಷೇಧಗಳೆಲ್ಲಿ?

ವರ್ಣನೀಯ ವಸ್ತು ಇಲ್ಲವೆ ವಿಷಯ ರಸಸೃಷ್ಟಿಯಾಗಿ ಮಾರ್ಪಡುವುದು ರಸಾವೇಶದಿಂದ. ಅದಿಲ್ಲದೆ ಯಾವುದೊಂದು ಪೂರ್ವಭಾವಿಯಾದ ಉದ್ದೇಶವನ್ನಿರಿಸಿಕೊಂಡು ಅದನ್ನು ಸಾಧಿಸಲಿಕ್ಕೆಂದೇ ಸಾಹಿತ್ಯ ಸೃಷ್ಟಿಗೆ ತೊಡಗುವುದರಿಂದ ಸಾಹಿತ್ಯವೇನೋ ಹುಟ್ಟಬಹುದು — ಆದರೆ ಜೀವಂತ ಸಾಹಿತ್ಯ ಹುಟ್ಟದು. ಇದರ ಅರ್ಥ ಸಾಹಿತ್ಯ ನಿರುದ್ದೇಶವಾದುದೆಂದಲ್ಲ. ನಿರುದ್ದೇಶವಾದುದೆಲ್ಲ ನಿರರ್ಥಕವಾದುದೇ. ಒಂದು ಮಾತನ್ನು ನೆನಪಿನಲ್ಲಿಟ್ಟರೆ ಸಾಕು: ನೇರವಾಗಿ ತೋರುವುದರಿಂದ ಈಡೇರದ ಉದ್ದೇಶ, ಪ್ರಕಟವಾಗಿ ಪ್ರಯತ್ನಿಸುವುದರಿಂದ ಫಲಿಸದ ಉದ್ದೇಶ ಭಾವಗಮ್ಯವಾದ ಮತ್ತು ಹೃದಯ ಸ್ಪರ್ಶಿಯಾದ ರೀತಿಯಲ್ಲಿ ಹೇಳುವುದರಿಂದ ಈಡೇರುತ್ತದೆ. ಆಟವಾಡುವುದರಿಂದ ಆರೋಗ್ಯಭಾಗ್ಯ ದೊರೆವುದೆಂಬ ಉದ್ದೇಶದಿಂದಲೇ ಆಟಕ್ಕೆ ನಿಂತರೆ ಆ ಆಟದಿಂದ ಆನಂದವೂ ಸಿಗುವುದಿಲ್ಲ, ಆರೋಗ್ಯವೂ ಲಭಿಸುವುದಿಲ್ಲ. ಹುರಿದುಂಬಿ, ಮೈಮರೆತು, ಮೈಯೆಲ್ಲ ನನೆ ಕೊನೆಯೇರಿ ಆಟವಾಡುವುದೇ ಮುಖ್ಯವಾದುದು. ಹಾಗೆ ಆಡಿದರೆ ಆರೋಗ್ಯ ತನ್ನಿಂದ ತಾನೇ ಲಭಿಸುವುದು. ಆದುದರಿಂದ ವರ್ಣನೀಯ ವಿಷಯದೊಡನೆ ತಾದಾತ್ಮ್ಯ ಹೊಂದಿ, ರಸಾವೇಶದ ಸೆಳೆತಕ್ಕೆ ಸಿಕ್ಕು, ತನ್ನ ಜೀವನ ದರ್ಶನದ ತಕ್ಕಡಿಯಲ್ಲಿ ತೂಗಿನೋಡಿ, ತನ್ನ ಬಾಳ ಬೆಲೆಗಳ ಒರೆಗಲ್ಲಿಗೆ ಒರೆದು ನೋಡಿ, ವರ್ಣನೀಯ ವಿಷಯವೇ ತಾನಾಗಿ, ತಾನೇ ವರ್ಣನೀಯ ವಿಷಯವಾಗಿ ಬರೆಯುವುದೇ ಮುಖ್ಯವಾದುದು. ಅದರಿಂದ ವ್ಯಕ್ತಿ ಸಮಾಜಗಳ ಹೃದಯ ಸಂಸ್ಕರಣದ ಉದ್ದೇಶ ತಾನಾಗಿಯೇ ಈಡೇರುವುದು. ಒಮ್ಮೊಮ್ಮೆ ಅಪ್ರಿಯವಾದುದನ್ನು ಸತ್ಯದ ಸಮರ್ಥನೆಗಾಗಿ ಬರೆಯಬೇಕಾಗಿ ಬಂದರೂ ಅದು ಸಹಾನುಭೂತಿಯ ಹೃದಯದಿಂದ ಹೊಮ್ಮಿ ಬರಬೇಕು. ಲೇಖಕನ ಸಹಾನುಭೂತಿಗೆ ಸೀಮೆಗಳಿರಕೂಡದು. ಎಂಥ ಪಾಪಿಯನ್ನೂ ಅವನು ತಿರಸ್ಕಾರದ ದೃಷ್ಟಿಯಿಂದ ನೋಡಲಾರ. ಅವನ ಸಾತ್ವಿಕ ಸಂತಾಪ ದೋಷದ ಮೇಲೆ, ದುರ್ಗುಣದ ಮೇಲೆ — ಜೀವಿಯ ಮೇಲಲ್ಲ. ಯಾವುದೊಂದು ವ್ಯಕ್ತಿಯ, ವರ್ಗದ, ವರ್ಣದ ದೂಷಣೆಗಾಗಿ ದ್ವೇಷಪೂರಿತವಾಗಿ ಬರೆದುದು ಸಾಹಿತ್ಯವಲ್ಲ — ರಾಡಿ ನೀರು. ಅದು 'ಅರ ಮೀಹಕ್ಕೆ ಯೋಗ್ಯಂ?'

ಕಿಂ ಸ್ವಿದ್ ವಕ್ಷ್ಯಾಮಿ? ಏನುಬೇಕಾದರೂ ಬರೆ. ಆದರೆ ವರ್ಣಿತ ವಿಷಯದ ಎದೆಯಲ್ಲಿ ನೀನೇ ನಿಂತು ಬರೆ. ತನ್ಮಯನಾಗಿ, ತದಾತ್ಮನಾಗಿ, ಭಾವಯೋಗಿಯಾಗಿ ಬರೆ. ಅವರಿವರ ದಾಕ್ಷಿಣ್ಯಕ್ಕಾಗಿ ಬರೆಯಬೇಡ; ಭಯಕ್ಕಾಗಿ ಬರೆಯಬೇಡ; ದ್ವೇಷಕ್ಕಾಗಿ ಬರೆಯಬೇಡ; ಆಶೆ ಆಮಿಷಗಳಿಗಾಗಿ ಬರೆಯಬೇಡ; ಹೊತ್ತುಗಳೆಯಲೆಂದು ವ್ಯರ್ಥವಾಗಿ ಬರೆಯಬೇಡ. ಜೀವಾನುಭವವು ಉತ್ಕಟವಾಗಿ ಅದಮ್ಯವಾಗಿ ಉಕ್ಕಿ ಅಭಿವ್ಯಕ್ತಿಯ ಅನಿವಾರ್ಯತೆಯು ಮನದಟ್ಟಾದಾಗ ಹಿತಮಿತವಾಗಿ, ಸತ್ಯಸಾಕ್ಷಿಯಾಗಿ, ಅನುದ್ವೇಗಕರವಾಗಿ, ಪ್ರಿಯವಾಗಿ ಬರೆ. ಲೇಖಕ, ನಿನ್ನ ಕಲೆ ಈಶ್ವರನ ವರದಾನ. ಅದನ್ನು ಅಲ್ಲದ ಸಲ್ಲದ ಬರೆಹಕ್ಕಾಗಿ ಬಳಸಿ ಭ್ರಷ್ಟಗೊಳಿಸಬೇಡ. ಕೆಡುಕಿನೊಡನೆ ಒಪ್ಪಂದ ಮಾಡಿಕೊಳ್ಳಬೇಡ; ಒಳಿತಿನ ಕೈಬಿಡಬೇಡ. ನೆಪೋಲಿಯನ್ ಜರ್ಮನಿಯ ಮೇಲೆ ದಾಳಿ ಮಾಡಿದಾಗ ರಣಗೀತೆಗಳನ್ನು ಬರೆಯಲಿಲ್ಲವೆಂಬ ಅಪಾದನೆಗೆ ಗುರಿಯಾಗಿದ್ದ ಗಯಟೆ

ಹೇಳಿದ ಮಾತು ನೆನಪಿರಲಿ: "In all my poetry I have never shammed what I have not lived through; what has not touched me to the quick I have never uttered in verse or prose. I made love-songs only when I was in love. How could I have written songs of hate without hatred?"

ಗಯಟೆಯ ಈ ಸೂತ್ರ ನೆನಪಿನಲ್ಲಿದ್ದರೆ ಬರೆವಣಿಗೆಯಲ್ಲಿ ಬರಬಹುದಾದ ಅಶುಭವಾದುದೆಲ್ಲ, ಅನಿಷ್ಟವಾದುದೆಲ್ಲ, ಅಪ್ರಮಾಣಿಕವಾದುದೆಲ್ಲ, ಕೃತ್ರಿಮತೆಯೆಲ್ಲ, ಕಿಲ್ಮಿಷವೆಲ್ಲ, ಕುತ್ಸಿತವೆಲ್ಲ, ಕುಹಕವೆಲ್ಲ ಅಲ್ಲವಾದುದೆಲ್ಲ, ಹೊಲ್ಲವಾದುದೆಲ್ಲ ಬರದಾಗುತ್ತದೆ. ಇಂದು ಲೇಖಕರ ಶಕ್ತಿಯನ್ನು ತಮ್ಮ ಸ್ವಾರ್ಥಕ್ಕಾಗಿ ದುರುಪಯೋಗಿಸಿಕೊಳ್ಳಲು ಅನೇಕರು ಹಾತೊರೆಯುತ್ತಲಿದ್ದಾರೆ. ಆದುದರಿಂದ ಲೇಖಕರಿಗೆ ಈ ಎಚ್ಚರಿಕೆಯ ಗಂಟೆ ಅತ್ಯಗತ್ಯವೆನಿಸಿದೆ. ಅವರು ಪ್ರಾಣಹೋದರೂ ಅಪ್ರಮಾಣಿಕವಾದುದನ್ನು ಬರೆಯೆನೆಂದು ಪ್ರತಿಜ್ಞಾಬದ್ಧರಾದರೆ ಮಾತ್ರ ತಮ್ಮ ಕಲೆಗೆ ನ್ಯಾಯವನ್ನು ನೀಡಬಲ್ಲರು.

ಲೇಖನ ಸ್ವಾತಂತ್ರ್ಯವೂ ಇತರ ನಾಗರಿಕ ಸ್ವಾತಂತ್ರ್ಯಗಳಂತೆ ನಿಯಮರಾಹಿತ್ಯದಿಂದ ಉಚ್ಛೃಂಖಲತೆಯಲ್ಲಿ ಪರ್ಯವಸಾನವನ್ನು ಹೊಂದುತ್ತದೆ. ಶಾಸನಬದ್ಧವಾದ ಸ್ವಾತಂತ್ರ್ಯವೊಂದೇ ಸರ್ವರಿಗೂ ದಕ್ಕುವ ಸ್ವಾತಂತ್ರ್ಯ. ಸಿಕ್ಕರೆ ಸ್ವಾತಂತ್ರ್ಯ ಸರ್ವರಿಗೂ ಸಿಗಬೇಕು; ಇಲ್ಲದಿದ್ದರೆ ಯಾರಿಗೂ ಇಲ್ಲ. ಲೇಖಕನೂ ಸಮಾಜದ ಒಂದು ಘಟಕ; ಅವನ ಕ್ರಿಯೆಯೂ ಒಂದು ಸಾಮಾಜಿಕ ಕ್ರಿಯೆ; ಅವನ ಮೇಲೆಯೂ ಸಾಮಾಜಿಕ ಹೊಣೆಗಾರಿಕೆಯಿದೆ. ಸಮಾಜದ ಇತರ ಹೊಣೆಗಾರ ವ್ಯಕ್ತಿಗಳಿಗೆ ಸಿಗದ ನಿಯಮರಾಹಿತ್ಯ, ನಿರಂಕುಶತೆ, ಅನಿಯಂತ್ರಿತ ಸ್ವಾಚ್ಛಂದ್ಯ, ಹೊಣೆಗಾರಿಕೆಯಂಟದ ಸ್ಥಾನಮಾನಗಳು, ನಾನು ಎಲ್ಲರನ್ನೂ ಟೀಕಿಸಬಲ್ಲೆನಾದರೂ ನನ್ನನ್ನು ಮಾತ್ರ ಯಾರೂ ಟೀಕಿಸಬಾರದೆಂಬ ವಿಶೇಷ ಗೌರವಗಳು ಲೇಖಕನಿಗೊಬ್ಬನಿಗೇ ಹೇಗೆ ಹೊರೆಯಬಲ್ಲುವು? ಸಂಸಾರ ಸಾಗರದಲ್ಲಿ ಬಾಳನೌಕೆಯನ್ನೇರಿ ಸಾಮಾಜಿಕರೆಲ್ಲ ಹೊರಟಿದ್ದಾರೆ. ಅವರಲ್ಲಿ ಲೇಖಕನಾದವನು ಎಲ್ಲರ ಮುನ್ನೋಟದ ಮೂರ್ತಿಯಾಗಿ ಅಂಬಿಗನ ಹೊಣೆಗಾರಿಕೆಯನ್ನು ಹೊರಲು ಮುಂದೆ ಬರಬೇಕೇ ಹೊರತು ಹೊಯ್ದಾಡುವ ನೌಕೆಯಲ್ಲಿಯೇ ತನ್ನ ಮರ್ಕಟನ ಆಟವನ್ನು ಆಡಿಸುವೆನೆಂದು ಹಟ ಹಿಡಿಯಬಾರದು. ಅದು ಉಳಿದವರಿಗೆಷ್ಟು ಅಪಾಯಕರವೋ ತನಗೂ ಅಷ್ಟೇ ಅಪಾಯಕರ!

### ಸರಸ್ವತ್ಯಾಸ್ತತ್ತ್ವಂ ಕವಿ ಸಹೃದಯಾಖ್ಯಂ

ಲೇಖಕರು ಎದುರಿಸಬೇಕಾದ ಸಮಸ್ಯೆಗಳು ಅನೇಕ. ಅವರ ಮಾಧ್ಯಮದ ಸಮಸ್ಯೆಯ ಬಗ್ಗೆ ಈ ಮೊದಲು ಉಲ್ಲೇಖಿಸಲಾಗಿದೆ. ಲೇಖಕರ ಮುಖ್ಯ ಸಮಸ್ಯೆ ಪಾಠಕ. ಲೇಖಕರು ಎಂಥ ಸತ್ಕೃತಿಗಳನ್ನು ರಚಿಸಿದರೇನಾಯಿತು, ಅವುಗಳನ್ನು ಅವಲೋಕಿಸಿ ಆಸ್ವಾದಿಸುವ ಸಹೃದಯರಿಲ್ಲದಿದ್ದರೆ "ಕಟ್ಟಿಯುಮೇನೊ? ಮಾಲೆಗಾಱನ ಪೊಸಬಾಸಿಗಂ ಮುಡಿವ ಭೋಗಿಗಳಿಲ್ಲದೆ

ಬಾಡಿಪೋಗದೇ ! " ಎಂದು ಜನ್ನನಂತೆಯೂ, "ಕವಿಯಧಿಕನಿದ್ದೊಡೇಂ ತವೆ ಕೇಳ್ವರಿಲ್ಲದೊಡೆ? ಎಂದು ರಾಘವಾಂಕನಂತೆಯೂ ಉದ್ಗಾರ ತೆಗೆಯಬೇಕಾಗುತ್ತದೆ." ಆದುದರಿಂದಲೇ ಸರಸ್ವತೀ ತತ್ತ್ವವು ಕವಿ – ಸಹೃದಯರಿಬ್ಬರನ್ನೂ ಒಳಕೊಂಡಿದೆಯೆಂದು ಅಭಿನವಗುಪ್ತರು ಸಾರಿದ್ದಾರೆ.

ಸಹೃದಯನಾರು ? ಲೇಖಕನ ಹೃದಯಕ್ಕೆ ಸಮಾನವಾದ ಹೃದಯವುಳ್ಳವನೇ ಸಹೃದಯ. ಅವನು ಹಾಗಿಲ್ಲದಿದ್ದರೆ ಸಾರಸ್ವತ ತತ್ತ್ವದ ಒಂದು ಅಂಗ ಭಂಗವಾದಂತೆ. ಒಂದು ಸತ್ಕೃತಿಯ ಸಾರವನ್ನು ಹೀರಲು ಸಹೃದಯನಿಗೂ ಶಕ್ತಿಬೇಕು, ಸಿದ್ಧತೆಬೇಕು, ಸುರುಚಿ ಬೇಕು, ರಸಜ್ಞತೆ ಬೇಕು, ವರ್ಣನೀಯ ತನ್ಮಯೀಭವನಯೋಗ್ಯತೆ ಬೇಕು. ಒಂದು ಮಾತಿನಲ್ಲಿ ಹೇಳುವುದಾದರೆ ಅವನು ಪರಕಾಯಪ್ರವೇಶ ವಿದ್ಯೆಯನ್ನು ಕಲಿಯಬೇಕು. ಉತ್ತಮ ರುಚಿಯ ಓದುಗರಿಲ್ಲದೆ ಉತ್ತಮ ಶ್ರೇಣಿಯ ಸಾಹಿತ್ಯ ಹುಟ್ಟದು. ಲೇಖಕನ ಸಮಸ್ಯೆ ಇದು : ಅವನು ಓದುಗರ ಮಟ್ಟಕ್ಕೆ ಮೀರಿದ ಕೃತಿರಚನೆ ಮಾಡಿದರೆ ಓದುಗರಿಗೆ ಅರ್ಥವಾಗದಂತೆ ಬರೆಯುವನೆಂಬ ಆಪಾದನೆಗೆ ಗುರಿಯಾಗುತ್ತಾನೆ; ಓದುಗರ ಮಟ್ಟಕ್ಕೆ ಅವನೇ ಇಳಿದರೆ ಅವನು ಕೆಳಮಟ್ಟಕ್ಕಿಳಿದ ಆಪಾದನೆಗೆ ಗುರಿಯಾಗುತ್ತಾನೆ. ಹಾಗಾದರೆ ಹೇಗೆ ಬರೆಯಬೇಕವನು ? " ಉತ್ಪತ್ಸ್ಯತೇಽಸ್ತಿ ಮಮ ಕೋಽಪಿ ಸಮಾನ ಧರ್ಮಾ। ಕಾಲೋಹ್ಯಯಂ ನಿರವಧಿರ್ವಿಪುಲಾ ಚ ಪೃಥ್ವೀ ॥ ಎಂದು ಭವಭೂತಿಯಂತೆ ಎಲ್ಲ ಲೇಖಕರೂ ಎದೆಯುಬ್ಬಿಸಿ ಹೇಳುವುದು ಸಾಧ್ಯವೆ? ಹೀಗೆಂದರೆ ಲೇಖನ ವ್ಯವಸಾಯದಿಂದಲೇ ಬದುಕುವ ಬರೆಹಗಾರರ ಗತಿಯೇನು ?

ಪ್ರತಿಯೊಂದು ರಾಷ್ಟ್ರವೂ ತಾನು ಎಂಥ ಸರಕಾರಕ್ಕೆ ತಕ್ಕುದಾಗಿದೆಯೋ ಅಂಥ ಸರಕಾರವನ್ನೇ ಪಡೆಯುವುದೆಂದು ಹೇಳುತ್ತಾರೆ. ಹಾಗೆಯೇ ಪ್ರತಿಯೊಂದು ಸಮಾಜವೂ ತಾನು ಎಂಥ ಸಾಹಿತ್ಯಕ್ಕೆ ತಕ್ಕುದಾಗಿದೆಯೋ ಅಂಥ ಸಾಹಿತ್ಯವನ್ನೇ ಪಡೆಯುವುದೆಂದು ಹೇಳಬಹುದು. ಆದುದರಿಂದ ಲೇಖಕನ ಪ್ರತಿಭೆಯ ದೃಷ್ಟಿಕಾರ್ಯ ಸೃಷ್ಟಿಕಾರ್ಯಗಳಷ್ಟೇ ಸಹೃದಯನ ಪ್ರತಿಭೆಯ ಅನುಸೃಷ್ಟಿ ಕಾರ್ಯವೂ, ರಸಪರಿಗ್ರಹಣ ಕಾರ್ಯವೂ ಅತ್ಯಾವಶ್ಯಕವಾದುದು. ಲೇಖಕನಿಗೆ ಬೇಕಾದ ಪೂರ್ವಸಿದ್ಧತೆಯಂತೆ ಓದುಗನಿಗೂ ಪೂರ್ವಸಿದ್ಧತೆ ಅಗತ್ಯ, ಅನಿವಾರ್ಯ. ಲೇಖನ ಕಲೆಯಂತೆ ವಾಚನ ಕಲೆಯೂ ತಪಸ್ಸಾಧ್ಯವಾದುದು.

ಈಗ ಸಾಹಿತ್ಯವನ್ನು ಹೇಗಾದರೂ ಆಗಲಿ ಓದಬೇಕೆನ್ನುವವರೇ ಕಡಮೆ. ಇನ್ನು ಅವರಿಗೆ ಪೂರ್ವಸಿದ್ಧತೆಯ ಕಟ್ಟು ಹಾಕಿದರೆ ಓದುಗರ ಈಗಿನ ಸಂಖ್ಯೆಯೂ ಕರಗಿಹೋಗುವುದು ! ಮೊದಲೇ ಸಾರಸ್ವತ ಪ್ರಪಂಚ ಬಹು ಜನರಿಗೆ ಬೇಡಾದ ಪ್ರಪಂಚ. ಇಲಿಯೆಟ್‌ನ ಈ ಮಾತು ಇಲ್ಲಿ ನೆನಪಾಗದಿರದು : "And just as those who should be the intellectuals regard theology, as a special study, like numismatics or heraldry with which they need not concern themselves, and theologians observe the same indifference to lite-rature and art, as special studies which do not concern them, so our political classes regard both fields as territories of which they have no reason to be ashamed of remaining in complete ignorance. Accordingly the more serious authors have a limited, and even provincial audience, and the more popular write for an illiterate and uncritical mob."

ಇದು ಆಂಗ್ಲ ಲೇಖಕರ ಹಣೆಯ ಬರೆಹವಾದರೆ ಕನ್ನಡ ಲೇಖಕರ ಲಲಾಟಲಿಖಿತವನ್ನೇನು ವರ್ಣಿಸುವುದಿದೆ? ಈ ನಾಡಿನಲ್ಲಿ ಸಾಹಿತ್ಯ ಮಠಾಧೀಶರಿಗೆ ಬೇಡವಾದ ವಸ್ತು ; ಅಧಿಕಾರಿಗಳಿಗೆ ಅನಾವಶ್ಯಕವಾದ ವಸ್ತು ; ವರ್ತಕರಿಗೆ ತ್ಯಾಜ್ಯವಾದ ವಸ್ತು ; ರಾಜಕಾರಣಿಗಳಿಗೆ

ಅಪ್ರಯೋಜಕವಾದ ವಸ್ತು; ಕೆಲವು ಕನ್ನಡ ಪ್ರಾಧ್ಯಾಪಕರಿಗೆ ಕೂಡ ಅನಿವಾರ್ಯವಾಗಿ ಓದಿಸಬೇಕಾದ ವಸ್ತು! ಏನೋ, ವಿದ್ಯಾರ್ಥಿಗಳೇ ಕೆಲವು ಕಾಮಪ್ರಚೋದಕ ಕಾದಂಬರಿಗಳನ್ನು ಓದಿದರೆ ಓದಬೇಕು!

ಇಷ್ಟಕ್ಕೇ ಮುಗಿಯಲಿಲ್ಲ ಈ ಓದುಗರ ಸಮಸ್ಯೆ. ಇದ್ದ ಬಿದ್ದ ಓದುಗರಲ್ಲೂ ಅನೇಕ ಅವಾಂತರ ಭೇದಗಳು. ಕೆಲವನ್ನು ಇಲ್ಲಿ ಉಲ್ಲೇಖಿಸದೆ ವಿಧಿಯಿಲ್ಲ.

(೧) **ಪ್ರಾದೇಶಿಕ ಭೇದಗಳು**: ಕನ್ನಡ ನಾಡು ಇನ್ನೂ ಐದು ತುಂಡುಗಳಲ್ಲಿ ವಿಭಕ್ತವಾಗಿದೆ. ಒಂದು ತುಂಡಿನ ಲೇಖಕರಿಗೆ ಅದೇ ಭಾಗದ ಓದುಗರೇ ಆಧಾರ. ಅಖಿಲ ಕರ್ನಾಟಕದ ಓದುಗರೆಲ್ಲರ ಸಕ್ರಿಯ ಸಹಾನುಭೂತಿಯನ್ನು ಗಳಿಸಿಕೊಂಡ ಲೇಖಕರು ಅತ್ಯಲ್ಪ. ಉಳಿದ ಲೇಖಕರ, ಅದರಲ್ಲೂ ಹೊಸ ಲೇಖಕರ ಕೃತಿಗಳಿಗೆ ಕರ್ನಾಟಕದ ಐದೂ ತುಂಡುಗಳಲ್ಲಿ ಓದುಗರು ದೊರೆಯದೇ ಹೋಗುತ್ತಾರೆ. ಇದಕ್ಕೆ ಕಾರಣಗಳೇನೇ ಇದ್ದರೂ ಅವುಗಳನ್ನು ಕಂಡು ಹಿಡಿದು ಹೋಗಲಾಡಿಸುವುದು ಅತ್ಯಗತ್ಯವಾದುದು.

(೨) **ಸನಾತನಿಗಳು**: ಇವರಿಗೆ ನಾಟಕದಲ್ಲಿ ಸಹ ಅಶ್ವತ್ಥಾಮನ ಆತ್ಮಹತ್ಯೆ ಅಕ್ಷಮ್ಯ ಅಪರಾಧವಾಗಿ ತೋರುತ್ತದೆ; ಪೌರಾಣಿಕ ಕಥೆಗಳಲ್ಲಿ ಮಾರ್ಪಾಟು ಪಾಪಕಾರ್ಯ ವಾಗಿ ಕಾಣುತ್ತದೆ.

(೩) **ಮತಾಭಿಮಾನಿಗಳು**: ಇವರು ಇನ್ನೊಂದು ಮತದವರು ತಮ್ಮ ಮತದ ಬಗೆಗೆ, ತಮ್ಮ ಮತೀಯರ ಬಗೆಗೆ ಸತ್ಯ ಸಂಗತಿಗಳನ್ನೇ ಬರೆದರೂ ಬೆಂಕಿಯಾಗುತ್ತಾರೆ. ಈ ಮತಾಭಿಮಾನ ಒಮ್ಮೊಮ್ಮೆ ವಿಕೋಪಕ್ಕೆ ಹೋಯಿತೆಂದರೆ ಒಂದು ಮತದವರು ಇನ್ನೊಂದು ಮತದ ಲೇಖಕನು ಬರೆದ ಪುಸ್ತಕವನ್ನು ಕೈಯಿಂದ ಮುಟ್ಟುವುದೂ ಪಾಪವೆನ್ನುವಷ್ಟರ ಮಟ್ಟಿಗೆ ದ್ವೇಷ ಹರಡುತ್ತದೆ.

(೪) **ವಾದ-ವಿವಾದಗಳು**: ಓದುಗರು ತಾವು ಯಾವ ರಾಜಕೀಯ ಆರ್ಥಿಕ ವಾದಕ್ಕೆ ಇಲ್ಲವೆ ಪಕ್ಷಕ್ಕೆ ಅಂಟಿಕೊಂಡಿರುವರೋ ಅದೇ ವಾದಕ್ಕೆ ಇಲ್ಲವೆ ಪಕ್ಷಕ್ಕೆ ಅಂಟಿಕೊಂಡ ಲೇಖಕನಿಗೆ ಪ್ರಥಮ ಪ್ರಾಶಸ್ತ್ಯವನ್ನು ಕೊಡುವುದೂ ಉಂಟು. ಒಮ್ಮೊಮ್ಮೆ ಲೇಖಕರೇ ಎಬ್ಬಿಸಿದ ಸಾಹಿತ್ಯಕ-ರಾಜಕೀಯ ವಾದ-ವಿವಾದಗಳಿಗೆ ಓದುಗರೇ ಬಲಿಯಾಗಿ ವಿಭಕ್ತರಾಗಿ ಹೋಗುವುದೂ ಉಂಟು.

(೫) **ಅನ್ಯಭಾಷಾ ಮೋಹಿಗಳು**: ಕೆಲವು ಓದುಗರು ಕನ್ನಡ ಪುಸ್ತಕಗಳನ್ನು ಓದಿ ಅವು ಬೇರೆ ಭಾಷೆಗಳ, ವಿಶೇಷವಾಗಿ ಆಂಗ್ಲ ಭಾಷೆಯ ತದ್ವಿಷಯಕ ಪುಸ್ತಕಗಳಿಗಿಂತ ಕಡಮೆ ತರಗತಿಯವುಗಳೆಂದು ಪ್ರಚಾರ ಮಾಡುವುದೇ ಪುರುಷಾರ್ಥವೆಂದು ಭಾವಿಸುತ್ತಾರೆ.

ಇವೆಲ್ಲ ಕಾರಣಗಳಿಂದ ಇದ್ದಷ್ಟು ಕನ್ನಡ ಓದುಗರೂ 'ಪಂಗಡ ಪಂಗಡವಾಗಿ ವಿಂಗಡಿಸಿ' ಹೋಗಿದ್ದಾರೆ. ಸಾಲದುದಕ್ಕೆ ಕನ್ನಡ ಲೇಖಕರಲ್ಲಿಯೂ ಇರಬೇಕಾದಷ್ಟು ಐಕಮತ್ಯವಿಲ್ಲ; ಪರಸ್ಪರ ಸಂಪರ್ಕ ಸಾಕಷ್ಟಿಲ್ಲ. ಇನ್ನು ಈ ಲೇಖಕರನ್ನು ಆಗಾಗ ಒಂದೆಡೆಗೆ ಕೂಡಿಸಿ, ಪರಸ್ಪರ ಸಂಪರ್ಕದಿಂದ ಅವರಲ್ಲಿ ಹೆಚ್ಚು ಸೌಹಾರ್ದವನ್ನು ಹುಟ್ಟಿಸಲು ಮತ್ತು ಅವರ ಓದುಗರ ಸಂಖ್ಯೆ ಯನ್ನು ಹೆಚ್ಚಿಸಲು ಹೆಚ್ಚು ಹೆಚ್ಚು ಲಕ್ಷ್ಯವೀಯಬೇಕೆಂದು ತೋರುತ್ತದೆ. ಲೇಖಕರು ಒಂದೆಡೆಗೆ ಒಂದೆರಡು ವಾರಗಳವರೆಗೆ ಒಟ್ಟಾಗಿ ಪರಸ್ಪರ ಪರಿಚಯವನ್ನಲ್ಲ, ಪರಸ್ಪರ ವಿಚಾರದ ವಿನಿಮಯದಿಂದ ಪಾರಸ್ಪರಿಕ ಪ್ರಯೋಜನವನ್ನೂ ಪಡೆದುಕೊಳ್ಳುವಂತಾದರೆ ಓದುಗರ ಮೇಲೆಯೂ ಇದರ ಒಳ್ಳೆಯ ಪರಿಣಾಮವಾಗದಿರದು.

ಹಿಂದಿನ ಕಾಲದಲ್ಲಿ ಕವಿಗಳೂ ಸಾಹಿತ್ಯ ನಿರ್ಮಾತರೂ ರಾಜರ, ಸಾಮಂತರ ಆಶ್ರಯ ದಲ್ಲಿದ್ದು ಸಾಹಿತ್ಯ ಸೃಷ್ಟಿ ಮಾಡುತ್ತಿದ್ದರು. ಇಂದು ನಾವು ರಾಜರನ್ನೆಲ್ಲ, ಸಾಮಂತರನ್ನೆಲ್ಲ,

ಶ್ರೀಮಂತರನ್ನೆಲ್ಲ ಪದಚ್ಯುತರನ್ನಾಗಿ ಮಾಡಿ ಸ್ವಸಂತೋಷದಿಂದ ಪ್ರಜಾರಾಜ್ಯ ಪದ್ಧತಿಯನ್ನು ಅಂಗೀಕರಿಸಿದ್ದೇವೆ. ಆದುದರಿಂದ ಲೇಖಕರನ್ನೊಳಗೊಂಡ ಎಲ್ಲ ಕಲಾವಿದರಿಗೂ ಆಶ್ರಯವನ್ನೀವ ಹೊಣೆ ಜನ ಸಾಮಾನ್ಯರ ಮೇಲೆ ಬಿದ್ದಿದೆ. ಈ ಹೊಣೆಯನ್ನು ಹೊರಲು ಅವರು ಸಮರ್ಥರಾಗ ಬೇಕಾದರೆ ಅವರ ಓದುವ ರುಚಿ ಶುಚಿಯಾಗಬೇಕು; ಅವರ ಗುಣಗ್ರಹಣಶಕ್ತಿ ಬೆಳೆಯ ಬೇಕು; ಲೇಖಕರನ್ನು ಪುರಸ್ಕರಿಸುವ ಪರಿಪಾಠ ಬೀಳಬೇಕು. "ಗೀತಸೂಕ್ತಿರಿಕ್ರಾಂತೇ ಸ್ತೋತಾ ದೇಶಾಂತರಸ್ಥಿತೇ। ಪ್ರತ್ಯಕ್ಷ ಕವಿಕಾವ್ಯೇತು ಸಾವಜ್ಞಃ ಸುಮಹತ್ಯಪಿ" ಎಂಬ ಮಾತನ್ನು ಸುಳ್ಳೆನಿಸುವ ಸದ್ಬುದ್ಧಿ ಅವರಿಗೆ ಬರಬೇಕು.

ಸಹೃದಯರಷ್ಟೇ ಸರಕಾರದ ಮೇಲೂ ಲೇಖಕರಿಗೆ ಉತ್ತೇಜನವೀಯುವ ಹೊಣೆ ಬಿದ್ದಿದೆ. ಭಾರತ ಸರಕಾರವು ಮಹಾಕವಿ 'ಕುವೆಂಪು' ಅವರ ಮಹಾಕೃತಿ, ಕನ್ನಡವು ವಿಶ್ವ ಸಾಹಿತ್ಯಕ್ಕೆ ನೀಡಿದ ಕಾಣಿಕೆ 'ರಾಮಾಯಣ ದರ್ಶನ'ಕ್ಕೆ ಬಹುಮಾನವನ್ನಿತ್ತುದೂ, ಮುಂಬೈ ಸರಕಾರವು ಮಹಾಕವಿ ಬೇಂದ್ರೆಯವರ ನಾಟಕಕ್ಕೆ ಬಹುಮಾನವಿತ್ತುದೂ ಅಭಿನಂದನೀಯ. ಆದರೆ ಇಷ್ಟು ಸಾಲದು. ಇಂಥ ಪಾರಿತೋಷಕಗಳ ಸಂಖ್ಯೆ ಹೆಚ್ಚಬೇಕು. ಈಗ ಒಬ್ಬಿಬ್ಬರು ಲೇಖಕರಿಗೆ ಕೊಡುತ್ತಿರುವಂತೆ ಅಸಹಾಯ ಸ್ಥಿತಿಯಲ್ಲಿರುವ ಇನ್ನೂ ಅನೇಕ ಲೇಖಕರಿಗೆ ಸರಕಾರವು ಸಹಾಯಧನವನ್ನು ನೀಡಬೇಕು. ಈಗ ಆಕಾಶವಾಣಿಯಲ್ಲಿ ಲೇಖಕರಿಗೇ ಎಲ್ಲರಿಗಿಂತ ಕಡಮೆ ಸಂಭಾವನೆ; ಚಲಚ್ಚಿತ್ರ ಪ್ರಪಂಚದಲ್ಲಿ ಸಹ ಕಥಾಲೇಖಕನಿಗೇ ಎಲ್ಲರಗಿಂತ ಕಡಮೆ ಪ್ರತಿಫಲ ಧನ. ಇದು ನಮ್ಮ ಸಮಾಜ ಲೇಖಕರನ್ನು ಎಷ್ಟು ಗೌರವಿಸುತ್ತಿದೆಯೆಂಬುದಕ್ಕೆ ಸಾಕ್ಷಿ.

ಲೇಖಕರಿಗೆ ಪ್ರಕಾಶಕರ ಸಮಸ್ಯೆ ತಪ್ಪಿದ್ದಲ್ಲ. ಲೇಖಕರ ಹಕ್ಕುಬಾಧ್ಯತೆಗಳನ್ನು ಸರಿಯಾಗಿ ರಕ್ಷಿಸುವ ಕಾಪೀರೈಟ್ ಶಾಸನ ಬೇಗ ಬರಬೇಕು. ಕನ್ನಡದಲ್ಲಿ ಹೊಸದಾಗಿ ಪ್ರಕಟವಾಗುವ ಎಲ್ಲ ಪುಸ್ತಕಗಳ ಬಗೆಗೆ ವಿವರಗಳನ್ನೂ ವಿಮರ್ಶೆಯನ್ನೂ ಒದಗಿಸುವ ನಿಯತಕಾಲಿಕವೊಂದು ಪ್ರಕಟವಾಗಬೇಕು. ಕನ್ನಡ ಪತ್ರಿಕಾ ಪ್ರಪಂಚದಲ್ಲಿ ಹೊಸ ಪುಸ್ತಕಗಳ ಸರಿಯಾದ ವಿಮರ್ಶೆಗೆ ಸ್ಥಲಾವಕಾಶ ಹೆಚ್ಚಬೇಕು. ಅಲ್ಲಲ್ಲಿ ಪುಸ್ತಕ ಪ್ರೇಮಿಗಳ ಸಂಘಗಳು ಏರ್ಪಟ್ಟು ಅವರು ಪ್ರತಿ ತಿಂಗಳು ಪ್ರಕಟವಾಗುವ ಪುಸ್ತಕಗಳಲ್ಲಿ ತಮ್ಮ ಮನಸ್ಸನ್ನು ಸೆಳೆದ ಪುಸ್ತಕಗಳಾವುವು ಎಂಬುದನ್ನು ಸಕಾರಣವಾಗಿ ಪತ್ರಿಕೆಗಳಲ್ಲಿ ಚರ್ಚಿಸಬೇಕು.

ಇಷ್ಟೆಲ್ಲ ಸಮಸ್ಯೆಗಳನ್ನು ಎದುರಿಸಿಯೂ ಕನ್ನಡ ಲೇಖಕರು ಸಾಹಿತ್ಯದ ವಿವಿಧಾಂಗಗಳಲ್ಲಿ ಸಾಕಷ್ಟು ಎತ್ತರ ಬೆಳೆದಿದ್ದಾರೆ. ಕಾವ್ಯ, ನಾಟಕ, ಕಾದಂಬರಿ, ಸಣ್ಣಕತೆ-ಮೊದಲಾದ ಕ್ಷೇತ್ರಗಳ ಕನ್ನಡದಲ್ಲಿ ರಚಿತವಾದ ಸಾಹಿತ್ಯ ಭಾರತದ ಯಾವುದೇ ಪ್ರಾದೇಶಿಕ ಸಾಹಿತ್ಯಕ್ಕೂ ಕಡಮೆಯದಲ್ಲವೆಂದೂ, ಅದರಲ್ಲಿ ವಿಶ್ವಸಾಹಿತ್ಯಕ್ಕೇ ಸೇರಲರ್ಹವಾದ ಕೃತಿರತ್ನಗಳನೇಕ ಥಳಥಳಿಸುತ್ತಲಿರುವುವೆಂದೂ ಎದೆತಟ್ಟಿ ಹೇಳಬಹುದು. ಅವುಗಳನ್ನಿಲ್ಲಿ ಹೆಸರಿಸುವ ಅಗತ್ಯವಿಲ್ಲ. ಅವೆಲ್ಲ ಪ್ರಸಿದ್ಧವಾದುವುಗಳೇ ಆಗಿವೆ. ಅವುಗಳನ್ನು ಹಿಂದೀ ಭಾಷೆಯಲ್ಲಿಯೂ, ಆಂಗ್ಲ ಭಾಷೆಯಲ್ಲಿಯೂ ಅನುವಾದಿಸಿ ಪ್ರಕಟಿಸುವ ಕಾರ್ಯವನ್ನು ಯಾರಾದರೂ ಕೈಕೊಂಡರೆ ಕನ್ನಡಕ್ಕೆ ಬಹು ದೊಡ್ಡ ಸೇವೆಯನ್ನವರು ಸಲ್ಲಿಸಿದಂತಾಗುತ್ತದೆ.

ಹೊಸ ಲೇಖಕರಲ್ಲಿ ಅಪರಿಪಕ್ವತೆ, ಅಕಾಲಿಕ ಅವಸರ. ಸಂಯಮರಾಹಿತ್ಯ, ಔಚಿತ್ಯ ವಿವೇಕಗಳ ದುರ್ಲಕ್ಷ್ಯ ಇತ್ಯಾದಿ ದೋಷಗಳಿವೆಯೆಂದು ಹಳಲೇಖಕರೂ, ಹಳಲೇಖಕರು ಹಳಬರಾಗಿ ಹೋಗಿದ್ದಾರೆ. ಹೊಸಕಾಲಕ್ಕೆ ಅವರ ಉಪಯೋಗ ಉಳಿದಿಲ್ಲವೆಂದು ಹೊಸಲೇಖಕರೂ ದೂರುತ್ತ ಕೂರುವುದರಿಂದ ಪ್ರಯೋಜನವಿಲ್ಲ. ಹೊಸ ಲೇಖಕರನ್ನು ಹಳಲೇಖಕರು ಸಹನೆಯಿಂದ, ಸಹಾನುಭೂತಿಯಿಂದ ತಿದ್ದಬೇಕು; ಹಳ ಲೇಖಕರಲ್ಲಿ ಹೊಸ ಲೇಖಕರು ನತಮಸ್ತಕರಾಗಿ ಅವರಿಂದ ಪಡೆಯಬಹುದಾದ ಪ್ರಯೋಜನವೆಲ್ಲ ಪಡೆಯಬೇಕು.

ಒಟ್ಟಿನಲ್ಲಿ ಕನ್ನಡನಾಡಿನ ಆಗುಹೋಗುಗಳೆಲ್ಲ ಕನ್ನಡ ಲೇಖಕರ ಆಗುಹೋಗುಗಳನ್ನು ಅವಲಂಬಿಸಿವೆ. ಇಷ್ಟೇ ಅಲ್ಲ, ಭಾರತದ ಆಗುಹೋಗುಗಳ ಮೇಲೆಯೂ ಪ್ರಭಾವ ಬೀರುವಷ್ಟು ಕನ್ನಡ ಲೇಖಕರು ಸತ್ವಶಾಲಿಗಳಾಗಬೇಕಾಗಿದೆ. ಹಿಂದೆ ಹಲವು ಸಲ ಕನ್ನಡನಾಡಿನಿಂದ ಜ್ಞಾನ ಗಂಗೆಯೂ, ಭಾವ ಭಾಗೀರತಿಯ ಉಕ್ಕೇರಿ ಉತ್ತರ ದಕ್ಷಿಣ ಭಾರತಗಳತ್ತ ಹರಿದು ಭಾರತವನ್ನೆಲ್ಲ ತೊಳೆದು ಬೆಳಗಿದುದುಂಟು. ಇಂದು ಮತ್ತೆ ಕನ್ನಡನಾಡಿಗೆ ಆ ಗೌರವ ದೊರೆಯಬೇಕಾದರೆ ಕನ್ನಡ ಲೇಖಕರು ಅಂದಿನವರ ಎತ್ತರಕ್ಕೆ ಏರಬೇಕು; ಕನ್ನಡ ಓದುಗರು ಕನ್ನಡ ಲೇಖಕರ ಎತ್ತರಕ್ಕೆ ಬೆಳೆದು ಅವರಿಗೆ ತಕ್ಕ ಉತ್ತೇಜನವನ್ನು ನೀಡಬೇಕು; ಕನ್ನಡನಾಡು ಒಂದಾಗಿ ಅಲ್ಲಿಯ ಸರಕಾರ ಲೇಖಕರಿಗೆ ಸಾಕಷ್ಟು ಆಶ್ರಯವನ್ನು ನೀಡಬೇಕು.

ಅಂದಿನವರಿಗೆ ಇಂದಿನವರು ಹೇಗೆ ಸರಿಯಾದಾರು ಎಂಬ ಸಂಶಯಬೇಡ. "ಅಂದಿನ ವರಿಗೆ ಇಂದಿನವರು ಸರಿಯಾಗರೆಂಬ ಅಂದಗೇಡಿಯ ಮಾತ ಕೇಳಲಾಗದು. ಅಂದೊಂದು ಪರಿ ಇಂದೊಂದು ಪರಿಯೆ ಗುರುಲಿಂಗ ಜಂಗಮ? ಅಂದೊಂದು ಪರಿ ಇಂದೊಂದು ಪರಿಯೆ ಪಾದೋದಕ ಪ್ರಸಾದ?" ಎಂದು ಶರಣ ಆದಯ್ಯನು ಎಂದೋ ಪ್ರಶ್ನೆ ಹಾಕಿದ್ದಾನೆ. ಹಿಂದಿನವರಿಗಿಂತ ನೂರ್ಮಡಿ ಹೆಚ್ಚು ಸೌಕರ್ಯಗಳು ಇಂದಿನವರಿಗಿವೆ. ಹಿಂದಿನವರಂತೆ ಇಂದಿನವರು 'ಹಲಗೆ ಬಳಪವ' ಹಿಡಿಯಬೇಕಾಗಿಲ್ಲ. 'ಕಂಠಪತ್ರದ ಉಲುಹು ಕೆಡದಂತೆ' ತಾಳಗರಿಗಳ ಮೇಲೆ ಬರೆಯಬೇಕಿಲ್ಲ. ಸಾಕಷ್ಟು ಸೌಕರ್ಯಗಳಿವೆ. ಆದರೆ ಹಿಂದಿನವರ ತಪಸ್ಸು ನಮ್ಮಲ್ಲಿದೆಯೇ? ಇದ್ದುದಾದರೆ ಸಂಕೋಚವೇಕೆ? ಲೆಕ್ಕಣಿಕೆ ಕೈಗೆ ಬರಲಿ; ಅದರಿಂದ ಜಗತ್ತಿಗೆಲ್ಲ ಮಾಧುರ್ಯ ಪ್ರಕಾಶಗಳನ್ನು ನೀಡಬಲ್ಲ ಕೃತಿಗಳು ರಸ ಸ್ರೋತವಾಗಿ ಪ್ರವಿಸಲಿ! ಬನ್ನಿ, "Here are the wings, there the sky; and freedom for all to soar!"

"ಬಾಳ ಹೊತ್ತಗೆಯಲ್ಲಿ ಪ್ರತಿದಿನವು ಪುಟವೊಂದು,
ಬರಿ ನಿತ್ಯ ಪ್ರತಿಪುಟದಿ ನವ್ಯ ಕೃತಿಯ;
ಬರಿ ಹಾಳೆಗಳನುಳಿಸಿ ಪಾಳ್ಗೈಯದಿರು ಅದನು –
ತುಂಬ ಬರೆ ನಿನ್ನ ಸ್ಮೃತಿ ಶ್ರುತಿಯ ಕೃತಿಯ ‖"

"ಮನೆ ಕುಡಿಕೆಯನು ಬಿಸುಡು, ಲೇಖನಿಯನೆಸೆಯತ್ತ,
ಪ್ರಖರ ಧೀ ಲೇಖನಿಯಿನೆದೆಯ ತೋಡು;
ಬಿಸಿರಕುತ ಚಿಮ್ಮಿ ಬರೆ, ಅದನದ್ದಿ ಬರೆ ನೀನು,
ಆಗ ಒಡಮೂಡುವುದು ನಿನ್ನದೇ ಹಾಡು!"

"ನಿನ್ನ ಚರ್ಮವೆ ತಾಡ ಪತ್ರವು
ನಿನ್ನ ಅಸ್ಥಿಯೆ ಕಂಠ ಪತ್ರವು
ನಿನ್ನ ಹೃದಯವೆ ಮಸಿಯ ಪಾತ್ರೆಯು
ಬರೆದುದೆಲ್ಲ ಪವಿತ್ರವು –
ದಿವ್ಯಜೀವನ ಚಿತ್ರವು."

**ಜಯಭಾರತ–ಜಯಕರ್ನಾಟಕ!**

ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು